O.S. NO. 141/13 PW-1 Dated 11-03-2019.

ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ- ಪ್ರತಿವಾದಿ ಪರ ವಕೀಲರಿಂದ

ದ್ಯಾವಮ್ಮನವರ ಜಮೀನಿನ ಪೂರ್ವಕ್ಕೆ ನಿಮಗೆ ಜಮೀನು ಮಂಜೂರಾಗಿದೆ ಎಂದರೆ ಸರಿಯಲ್ಲ. ಪ್ರತಿವಾದಿ ಹೊಸ ಮನೆಯನ್ನು ಕಟ್ಟಿರುವ ಬಗ್ಗೆ ನಾನೇ ನೋಡಿ ತಿಳಿದುಕೊಂಡಿದ್ದೇನೆ. ಆ ಬಗ್ಗೆ ತಹಸೀಲ್ದಾರವರಿಗೆ, ರೆವಿನ್ಯೂ ಇನ್ಸ್ ಪೆಕ್ಟರ್ ಗೆ ನಾನು ದೂರು ನೀಡಿರುವುದಿಲ್ಲ, ಅವರನ್ನು ಸ್ಥಳಕ್ಕೂ ಕರೆಸಿರುವುದಿಲ್ಲ. ಆ ಬಗ್ಗೆ ಸರ್ವೆ ಇಲಾಖೆಗೆ ನಾನು ದೂರು ನೀಡಲಿಲ್ಲ. ದ್ಯಾವಮ್ಮನವರ ಕೆ ಎ ಟಿ ಯಲ್ಲಿ ಸಲ್ಲಿಸಿದ್ದ ಅಪೀಲಿನಂತೆ ಮೈಸೂರು ಡೆಪ್ಯೂಟಿ ಕಮಿಷನರ್ ರವರ ಬಳಿ ವಿಚಾರಣೆಗೆ ಅಪೀಲನ್ನು ವರ್ಗಾಯಿಸಲಾಗಿದೆ ಎಂದರೆ ಸರಿಯಲ್ಲ. ನಾನು ಸದರಿ ಅಪೀಲಿಗೆ ಹಾಜರಾಗಿರುವುದಿಲ್ಲ. ನೀವು ಹೇಳಿದಂತೆ ಪ್ರತಿವಾದಿ ನಿಮ್ಮ ಸ್ವತ್ತಿನಲ್ಲಿ ಯಾವುದೇ ಕಟ್ಟಡ ನಿರ್ಮಿಸಿಲ್ಲವೆಂದರೆ ಸರಿಯಲ್ಲ. ಪ್ರತಿವಾದಿಯವರಿಗೆ ಮಂಜೂರಾಗಿರುವ ಸ್ವತ್ತಿನಲ್ಲಿ ಕಟ್ಟಡ ನಿರ್ಮಿಸಿದ್ದಾರೆ ಎಂದರೆ ಸರಿಯಲ್ಲ. ನೀವು ಪ್ರತಿವಾದಿಯವರ ಜಮೀನಿನ ಚಕ್ಕುಬಂದಿಯನ್ನು ಸೇರಿಸಿಕೊಂಡು ದಾವಾದಲ್ಲಿ ಸುಳ್ಳು ತಿದ್ದುಪಡಿ ಮಾಡಿದ್ದೀರಿ ಎಂದರೆ ಸರಿಯಲ್ಲ. ಪ್ರತಿವಾದಿ ನಿರ್ಮಿಸಿರುವ ಕಟ್ಟಡದಲ್ಲಿ ನಿಮಗೆ ಯಾವುದೇ ಹಕ್ಕೂ ಇಲ್ಲಾ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ ಜಡ್ಜ್, ಆಲೂರು